

## ಕತ್ತೆ ಪ್ರಸಂಗ

ಸಾಮಾನ್ಯವಾಗಿ ತಿಪಟೂರು, ತುಮಕೂರು ಚನ್ನರಾಯಪಟ್ಟಣ ತಾಲ್ಲೂಕುಗಳಲ್ಲಿ ತೆಂಗಿನ ತೋಟಕ್ಕೆ ಗೊಬ್ಬರಕ್ಕಾಗಿ ಕುರಿ ಮಂದೆ, ಕತ್ತೆ ಮಂದೆಯನ್ನ ಕಟ್ಟಿಸುತ್ತಾರೆ. ಹಾಗೆ ತಿಪಟೂರಿನ ನನ್ನ ತಂಗಿಯ ಮನೆಯಲ್ಲಿ ಅವರ ತೋಟಕ್ಕೆ ಕತ್ತೆ ಮಂದೆಯನ್ನು ಕಟ್ಟಿಸಲಾಗಿತ್ತು. ನೂರಾರು ಕತ್ತೆಗಳೊಂದಿಗೆ ಕತ್ತೆ ಮೇಯಿಸುವವರು ಕೂಡ ಬಂದಿದ್ದರು. ಹಾಗೆ ನನ್ನ ತಂಗಿಯ ಐದು ವರ್ಷದ ಮಗನಿಗೆ ಅವರನ್ನು ಕರೆಯಲು ಹೇಳಿದೆವು. ಅವನು ಮನೆಯ ಬಾಗಿಲಲ್ಲೇ ನಿಂತುಕೊಂಡು, 'ರೀ ಮಾಮ ಊಟಕ್ಕೆ ಬನ್ನಿ. ರೀ ಮಾಮ ಊಟಕ್ಕೆ ಬನ್ನಿ' ಅಂತ ಎರಡು ಮೂರು ಸಾರಿ ಕೂಗಿದ. ಅವರು ತಿರುಗಿ ನೋಡದ ಕಾರಣ ಮತ್ತೆ, 'ರೀ ಮಾಮ, ಊಟಕ್ಕೆ ಬರಬೇಕಂತೆ' ಅಂತ ಹಲವಾರು ಬಾರಿ ಕೂಗಿ ಕೊನೆಗೆ ಅವನಿಗೆನನ್ನಿಸಿತೋ ಏನೋ, 'ರೀ... ಕತ್ತೆ ಮಾಮಾ, ರೀ... ಕತ್ತೆ ಮಾಮಾ... ಊಟಕ್ಕೆ ಬರಬೇಕಂತೆ!...' ಅನ್ನೋದೆ! ಪಾಪ ಅವನದೇನು ತಪ್ಪು. ತಾಯಂದಿರು ನಾವು, ಹಾಲು ತರುವವರು 'ಹಾಲು ಮಾಮ', ವ್ಯಾನಲ್ಲಿ ಸ್ಕೂಲಿಗೆ ಕರೆದುಕೊಂಡು ಹೋಗುವವರು 'ವ್ಯಾನ್ ಮಾಮ' ಎಂದು ಹೇಳಿಕೊಟ್ಟಿದ್ದೇ ತಪ್ಪಾ ಅಂತ!...

**ರಾಜೇಶ್ವರಿ ಎಚ್.ಎಲ್.**

## ಆಚೆ ಹೋಗಿ ಈಚೆ ಬಂದ್ರು...

ಐದರ ನಮ್ಮ ಪುಟ್ಟಿ ಬಲು ಚೂಟಿ. ತನಗೆ ತೋಚಿದ್ದನ್ನು ಥಟ್ಟನೆ ಹಾಗೇ ಹೇಳಿಬಿಡುವಾಕೆ. ಅಪ್ಪ ಅವಳನ್ನು ಆಗಾಗ ತಿದ್ದುತ್ತ, 'ಪುಟ್ಟೀ... ಯಾರಾದ್ರೂ ಹೊರಗಿನವರು ಕೇಳಿದ್ರೆ ಟಾಯ್ಲೆಟ್‌ಗೆ ಹೋಗಿದ್ದಾರೆ ಅಂತ ನೇರ ಹೇಳಬಾರದು... ಆಚೆ ಹೋಗಿದ್ದಾರೆ ಎನ್ನಬೇಕು ಆಯ್ತಾ?...' ಎಂದು ಹೇಳಿಕೊಡುತ್ತಿದ್ದ. ಆಗೆಲ್ಲ ಪುಟ್ಟಿ 'ಆಯ್ತು, ಆಯ್ತು' ಅಂತ ತಲೆ ಅಲುಗಿಸುತ್ತಿದ್ದಳು. ಒಂದು ಭಾನುವಾರ ಬೆಳಗ್ಗೆ ಪುಟ್ಟಿ ಅಂಗಳದಲ್ಲಿ ಆಡುತ್ತಿದ್ದಾಗ ಅಪ್ಪನ ಗೆಳೆಯರೊಬ್ಬರು ಹಾಜರ್. ಬಂದವರೇ, 'ಅಪ್ಪ ಎಲ್ಲಿ?' ಎಂದು ಅವಳನ್ನು ಪ್ರಶ್ನಿಸಿದರು. ಪುಟ್ಟಿ ಥಟ್ಟನೆ, 'ಅಂಕಲ್, ಅಪ್ಪ ಆಚೆ ಹೋಗಿ ಈಚೆ ಬಂದ್ರು ಈಗ...' ಎನ್ನಬೇಕೆ? ಗೆಳೆಯರಿಗೆ ತಬ್ಬಿಬ್ಬು! ಆಗಷ್ಟೇ ಹೊರಬಂದು ಕೇಳಿಸಿಕೊಂಡ ಅಪ್ಪನಿಗೂ ಏನು ಹೇಳಲು ತೋಚದೆ ಪೆಚ್ಚಾಗಿ ನಿಂತೇ ಇದ್ದ!!

**ಸುಶೀಲಾ ಆರ್. ರಾವ್**



ಚಿತ್ರಗಳು: ಗಣೇಶ ಆಚಾರ್ಯ